All India Radio: Bangalore
National Bulletin In Kannada
27.11.2026 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
27.11.2026 7.35 am

ಮುಖ್ಯಾಂಶಗಳು

೧. ರಾಷ್ಟ್ರಪತಿ ದ್ರೌಪದಿ ಮುರ್ಮು ಇಂದಿನಿಂದ ಎರಡು ದಿನ ಕೇರಳಂ ಭೇಟಿ; ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ

೨. ಸಂಸತ್ತಿನ ವಿಶೇಷ ಅಧಿವೇಶನ ಇದೇ ೩೦ ರಿಂದ ಆರಂಭ

೩. ಬಾಲ್ಯವಿವಾಹ ಮುಕ್ತ ಭಾರತ ಅಭಿಯಾನದ ಎರಡನೇ ವಾರ್ಷಿಕೋತ್ಸವ: ನವದೆಹಲಿಯಲ್ಲಿ ಇಂದು ರಾಷ್ಟ್ರೀಯ ಮಟ್ಟದ ಕಾರ್ಯಕ್ರಮ

೪. ನವದೆಹಲಿಯಲ್ಲಿ ಇಂದು ೨೫ನೇ ಹಿಂದೂ ಮಹಾಸಾಗರ ವಲಯ ಸಹಕಾರ ಸಂಘಟನೆ ಸಚಿವರ ಮಂಡಳಿ ಸಭೆ

೫. ಫಿಡೆ ವಿಶ್ವ ಚೆಸ್ ಚಾಂಪಿಯನ್ ಷಿಪ್: ಮೂರನೇ ಸುತ್ತಿನಲ್ಲೂ ಡ್ರಾ ಸಾಧಿಸಿದ ಗುಕೇಶ್ - ಸಿಂದರೋವ್

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದಿನಿಂದ ಎರಡು ದಿನ ಕೇರಳಂಗೆ ಭೇಟಿ ನೀಡಲಿದ್ದಾರೆ.

ಬಳಿಕ ಅವರು ಮಿಜೋರಾಂ ಮತ್ತು ನಾಗಾಲ್ಯಾಂಡ್‌ಗೆ ತೆರಳಿದ್ದಾರೆ.

ಇಂದು ಕೇರಳದ ಕಾಲಡಿ ಬಳಿಯ ಆದಿ ಶಂಕರಾಚಾರ್ಯರ ಜನ್ಮಸ್ಥಳಕ್ಕೆ ಭೇಟಿ ನೀಡಲಿರುವ ರಾಷ್ಟ್ರಪತಿ, ಬಳಿಕ ತ್ರಿಶೂರಿನಲ್ಲಿ ವೈದ್ಯರತ್ನಂ ಆಯುರ್ವೇದ ಕಾಲೇಜಿನ ಸುವರ್ಣ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ನಾಳೆ ಎಳಿಮಲೆಯ ಭಾರತೀಯ ನೌಕಾಪಡೆ ಅಕಾಡೆಮಿಯ ೨೦೨೬ರ ಶರತ್ಕಾಲದ ನಿರ್ಗಮನ ಪಥಸಂಚಲನದಲ್ಲಿ ಭಾಗವಹಿಸಲಿದ್ದಾರೆ.

ಸಂಸತ್ತಿನ ಲೋಕಸಭೆಯ ಕಲಾಪ ನವೆಂಬರ್ ೩೦ರಿಂದ ಹಾಗೂ ರಾಜ್ಯಸಭೆಯ ಕಲಾಪ ಡಿಸೆಂಬರ್ ೧ರಿಂದ ಅಗತ್ಯ ಸರ್ಕಾರಿ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶದಿಂದ ಪುನರಾರಂಭಗೊಳ್ಳಲಿದೆ.

ಸರ್ಕಾರಿ ಕಾರ್ಯಕಲಾಪಗಳ ಅಗತ್ಯಕ್ಕೆ ಅನುಗುಣವಾಗಿ ಉಭಯ ಸದನಗಳ ಕಲಾಪ ಡಿಸೆಂಬರ್ ೩ರಂದು ಮುಕ್ತಾಯಗೊಳ್ಳುವ ಸಾಧ್ಯತೆಯಿದೆ. ಈ ಅವಧಿಯಲ್ಲಿ ಪ್ರಶ್ನೋತ್ತರ ಕಲಾಪ, ಶೂನ್ಯವೇಳೆ ಹಾಗೂ ಖಾಸಗಿ ಸದಸ್ಯರ ಕಲಾಪಗಳು ಇರುವುದಿಲ್ಲ.

೨೦೨೬ರ ಆಗಸ್ಟ್ ೧೩ರಂದು ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿದ್ದ ಲೋಕಸಭೆಯ ಕಲಾಪವನ್ನು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಪುನರಾರಂಭಿಸುವಂತೆ ನಿರ್ದೇಶನ ನೀಡಿದ್ದಾರೆ.

ಇದೇ ವೇಳೆ, ಆಗಸ್ಟ್ ೧೩ರಂದು ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿದ್ದ ರಾಜ್ಯಸಭೆಯ ಕಲಾಪವನ್ನು ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅವರು ಬುಧವಾರ ಬೆಳಿಗ್ಗೆ ೧೧ ಗಂಟೆಗೆ ಪುನರಾರಂಭಿಸುವಂತೆ ಸೂಚಿಸಿದ್ದಾರೆ. ಅಗತ್ಯ ಸರ್ಕಾರಿ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ರಾಜ್ಯಸಭೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆಗಸ್ಟ್ ೧೩ರಂದು ಉಭಯ ಸದನಗಳ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದ್ದರೂ, ಮುಂಗಾರು ಅಧಿವೇಶನವನ್ನು ಇದುವರೆಗೆ ಅಧಿಕೃತವಾಗಿ ಅಂತ್ಯಗೊಳಿಸಿಲ್ಲ.

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಇಂದು ನವದೆಹಲಿಯಲ್ಲಿ ಬಾಲ್ಯವಿವಾಹ ಮುಕ್ತ ಭಾರತ ಅಭಿಯಾನದ ಅಂಗವಾಗಿ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮ ಆಯೋಜಿಸಿದೆ.

ಸರ್ಕಾರ ಮತ್ತು ಸಮಾಜದ ಸಾಮೂಹಿಕ ಪ್ರಯತ್ನಗಳ ಮೂಲಕ ಬಾಲ್ಯವಿವಾಹವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಉದ್ದೇಶದಿಂದ ೨೦೨೪ರ ನವೆಂಬರ್ ೨೭ರಂದು ಈ ರಾಷ್ಟ್ರೀಯ ಅಭಿಯಾನ ಆರಂಭಿಸಲಾಗಿತ್ತು. ಅಭಿಯಾನದ ಎರಡನೇ ವಾರ್ಷಿಕೋತ್ಸವದ ಅಂಗವಾಗಿ ನಡೆಯುವ ಕಾರ್ಯಕ್ರಮದಲ್ಲಿ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಗಳು, ಕೇಂದ್ರ ಸಚಿವಾಲಯಗಳ ಅಧಿಕಾರಿಗಳು, ಬಾಲ್ಯವಿವಾಹ ನಿಷೇಧಾಧಿಕಾರಿಗಳು, ಮಕ್ಕಳ ಕಲ್ಯಾಣ ಸಮಿತಿ ಸದಸ್ಯರು, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ವಿಶ್ವಸಂಸ್ಥೆಯು ನವೆಂಬರ್ ೨೭ ಅನ್ನು ಬಾಲ್ಯ, ಅಪ್ರಾಪ್ತ ವಯಸ್ಸಿನ ಮತ್ತು ಬಲವಂತದ ಬಾಲ್ಯ ವಿವಾಹ ನಿರ್ಮೂಲನೆಗಾಗಿ ಅಂತರರಾಷ್ಟ್ರೀಯ ದಿನವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ.

ಅಭಿಯಾನದಡಿ ಬಾಲ್ಯವಿವಾಹದ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸುವುದು, ಸಮುದಾಯಗಳ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವುದು, ಬಾಲ್ಯವಿವಾಹ ನಿಷೇಧಾಧಿಕಾರಿಗಳ ಕಾರ್ಯವ್ಯವಸ್ಥೆಯನ್ನು ಬಲಪಡಿಸುವುದು ಹಾಗೂ ಹೆಣ್ಣು ಮಕ್ಕಳ ಶಿಕ್ಷಣ, ಸಬಲೀಕರಣ ಮತ್ತು ಕಲ್ಯಾಣಕ್ಕೆ ಆದ್ಯತೆ ನೀಡಲಾಗುತ್ತಿದೆ.

ಬಾಲ್ಯವಿವಾಹ ಘಟನೆಗಳನ್ನು ವರದಿ ಮಾಡಲು, ಬಾಲ್ಯವಿವಾಹ ನಿಷೇಧಾಧಿಕಾರಿಗಳ ವಿವರ ಪಡೆಯಲು ಹಾಗೂ ಬಾಲ್ಯವಿವಾಹ ನಿರ್ಮೂಲನೆಗೆ ಪ್ರತಿಜ್ಞೆ ಸ್ವೀಕರಿಸಲು ವಿಶೇಷ ಪೋರ್ಟಲ್ ಆರಂಭಿಸಲಾಗಿದೆ. ನಾಗರಿಕರು ಮತ್ತು ಸಂಸ್ಥೆಗಳು ಈ ಪೋರ್ಟಲ್, ಮೈಜೆಒವಿ ಹಾಗೂ ಮೈ ಭಾರತ್ ವೇದಿಕೆಗಳ ಮೂಲಕ ಅಭಿಯಾನದಲ್ಲಿ ಪಾಲ್ಗೊಳ್ಳುವಂತೆ ಸಚಿವಾಲಯ ಮನವಿ ಮಾಡಿದೆ.

ಭಾರತವು ೨೫ನೇ ಹಿಂದೂ ಮಹಾಸಾಗರ ವಲಯ ಸಹಕಾರ ಸಂಘಟನೆ-ಐಒಆರ್‌ಎ ಸಚಿವರ ಮಂಡಳಿ ಸಭೆಯನ್ನು ಇಂದು ನವದೆಹಲಿಯಲ್ಲಿ ಆಯೋಜಿಸಿದೆ.

ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್, ಸೀಶೆಲ್ಸ್ ವಿದೇಶಾಂಗ ಸಚಿವ ಬ್ಯಾರಿ ಫೌರೆ, ಮಾರಿಷಸ್ ವಿದೇಶಾಂಗ ಸಚಿವ ಧನಂಜಯ್ ರಾಮ್‌ಫುಲ್ ಹಾಗೂ ಶ್ರೀಲಂಕಾ ವಿದೇಶಾಂಗ ಸಚಿವ ವಿಜಿತ ಹೆರಾತ್ ಸೇರಿದಂತೆ ಹಲವು ಗಣ್ಯರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

೨೦೨೫ರಿಂದ ೨೦೨೭ರವರೆಗಿನ ಭಾರತದ ಐಒಆರ್‌ಎ ಅಧ್ಯಕ್ಷತೆಯ ಅವಧಿಗೆ 'ಹಿಂದೂ ಮಹಾಸಾಗರ ವಲಯದಲ್ಲಿ ನಾವೀನ್ಯತೆ, ಮುಕ್ತತೆ, ಸ್ಥಿತಿಸ್ಥಾಪಕತೆ ಮತ್ತು ಹೊಂದಾಣಿಕೆ' ಎಂಬ ಧ್ಯೇಯವಾಕ್ಯವನ್ನು ರೂಪಿಸಲಾಗಿದೆ.

ಹಿಂದೂ ಮಹಾಸಾಗರ ವಲಯದ ೨೩ ಸದಸ್ಯ ರಾಷ್ಟ್ರಗಳು ಹಾಗೂ ೧೨ ಸಂವಾದ ಪಾಲುದಾರ ರಾಷ್ಟ್ರಗಳ ಸಚಿವರು ಮತ್ತು ಹಿರಿಯ ಅಧಿಕಾರಿಗಳು ಈ ಉನ್ನತ ಮಟ್ಟದ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಇಂಡೋ-ಪೆಸಿಫಿಕ್ ವಲಯವು ಮಹತ್ವದ ಘಟ್ಟದಲ್ಲಿರುವ ಸಂದರ್ಭದಲ್ಲಿ ಈ ಸಭೆ ನಡೆಯುತ್ತಿದೆ.

ಐಒಆರ್‌ಎ ಸಂಘಟನೆಯ ಭವಿಷ್ಯದ ನೀತಿ ನಿರ್ದೇಶನಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದ್ದು, ಪ್ರಾದೇಶಿಕ ಸಹಕಾರದ ಚೌಕಟ್ಟುಗಳ ಪರಾಮರ್ಶೆ ಹಾಗೂ ಸಹಯೋಗದ ನೂತನ ಕ್ಷೇತ್ರಗಳನ್ನು ಗುರುತಿಸುವುದಕ್ಕೆ ಒತ್ತು ನೀಡಲಾಗುವುದು.

ಶಾಂತಿ, ಸ್ಥಿರತೆ, ಮುನ್ಸೂಚನೆಗೆ ಪೂರಕ ವಾತಾವರಣ ಮತ್ತು ಸುಸ್ಥಿರ ಅಭಿವೃದ್ಧಿಯ ವಲಯವಾಗಿ ಹಿಂದೂ ಮಹಾಸಾಗರ ಪ್ರದೇಶದ ಮಹತ್ವವನ್ನು ನವದೆಹಲಿಯ ಈ ಸಭೆ ಮತ್ತೊಮ್ಮೆ ಸಾರಲಿದೆ.

ಗೋವಾದಲ್ಲಿ ನಡೆಯುತ್ತಿರುವ ೫೭ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಎನೇ ದಿನವಾದ ಇಂದು, ಚಿತ್ರರಂಗದ ಖ್ಯಾತ ಗಣ್ಯರ ಸಂವಾದ, ನಿರ್ದೇಶಕರೊಂದಿಗಿನ ಸಂವಾದ ಹಾಗೂ ವೈವಿಧ್ಯಮಯ ಚಲನಚಿತ್ರಗಳ ಪ್ರದರ್ಶನಗಳು ಪ್ರೇಕ್ಷಕರನ್ನು ಆಕರ್ಷಿಸಲಿವೆ.

ಇಂದಿನ ಪ್ರಮುಖ ಆಕರ್ಷಣೆಗಳಲ್ಲಿ ಫರ್ಹಾನ್ ಅಖ್ತರ್, ಅಶುತೋಷ್ ಗೋವಾರಿಕರ್ ಮತ್ತು ಮಧುರ್ ಭಂಡಾರ್ಕರ್ ಭಾಗವಹಿಸುವ ವಿಶೇಷ ಸಂವಾದ ಹಾಗೂ ಬಹುನಿರೀಕ್ಷಿತ ಪಂಚಾಯತ್ ಐದನೇ ಆವೃತ್ತಿಯ ಮೊದಲ ಕಂತಿನ ಪ್ರದರ್ಶನ ಸೇರಿವೆ.

ಚಿತ್ರನಿರ್ದೇಶಕ ಹಾಗೂ ನಟ ಫರ್ಹಾನ್ ಅಖ್ತರ್, ನಿರ್ದೇಶಕರಾದ ಅಶುತೋಷ್ ಗೋವಾರಿಕರ್ ಮತ್ತು ಮಧುರ್ ಭಂಡಾರ್ಕರ್ ಭಾಗವಹಿಸುವ 'ದಿ ಲೆಜೆಂಡರಿ ೨೫' ವಿಶೇಷ ಸಂವಾದ ಇಂದಿನ ಪ್ರಮುಖ ಆಕರ್ಷಣೆಯಾಗಿದೆ. ೨೦೦೧ರಲ್ಲಿ ಬಿಡುಗಡೆಯಾದ 'ದಿಲ್ ಚಾಹ್ತಾ ಹೈ', 'ಲಾಗಾನ್' ಮತ್ತು 'ಚಾಂದನಿ ಬಾರ್' ಚಿತ್ರಗಳ ಪಯಣ ಹಾಗೂ ಅವುಗಳ ಪ್ರಭಾವದ ಕುರಿತು ಈ ಸಂವಾದದಲ್ಲಿ ಚರ್ಚಿಸಲಾಗುವುದು.

ನಂತರ ಮಧ್ಯಾಹ್ನ, ಚಿತ್ರ ನಿರ್ದೇಶಕ ಕಾರ್ತಿಕ್ ಸುಬ್ಬರಾಜ್ ಅವರು 'ವಾಟ್ ಇಫ್ ದ ವಿಲನ್ ಈಸ್ ರೈಟ್' ಎಂಬ ಸಂವಾದಾತ್ಮಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದು, ಚಿತ್ರ ನಿರ್ಮಾಣದಲ್ಲಿ ವಿಭಿನ್ನ ದೃಷ್ಟಿಕೋನಗಳ ಕುರಿತು ವಿಚಾರ ವಿನಿಮಯ ನಡೆಸಲಿದ್ದಾರೆ.

ಇದೇ ವೇಳೆ, ದೀಪಕ್ ಕುಮಾರ್ ಮಿಶ್ರಾ ನಿರ್ದೇಶನದ 'ಪಂಚಾಯತ್' ಐದನೇ ಆವೃತ್ತಿಯ ಮೊದಲ ಕಂತನ್ನು ಪಣಜಿಯ ಐನಾಕ್ಸ್ ಚಿತ್ರಮಂದಿರದಲ್ಲಿ ವಿಶೇಷವಾಗಿ ಪ್ರದರ್ಶಿಸಲಾಗುವುದು. ಉತ್ಸವದ ವಿವಿಧ ಚಿತ್ರಮಂದಿರಗಳಲ್ಲಿ ಭಾರತೀಯ ಹಾಗೂ ಅಂತಾರಾಷ್ಟ್ರೀಯ ಚಲನಚಿತ್ರಗಳ ವೈವಿಧ್ಯಮಯ ಪ್ರದರ್ಶನಗಳೂ ನಡೆಯಲಿವೆ.

ಮಿರಾಮಾರ್ ಬೀಚ್, ವಾಗತೋರ್ ಬೀಚ್ ಹಾಗೂ ಮಾರ್ಗೋವಾದ ರವೀಂದ್ರ ಭವನದಲ್ಲಿ ಬಯಲು ಚಿತ್ರಪ್ರದರ್ಶನಗಳು ಮುಂದುವರಿಯಲಿದ್ದು, ಸಾರ್ವಜನಿಕರಿಗೆ ಚಲನಚಿತ್ರ ವೀಕ್ಷಣೆಯ ಅನುಭವವನ್ನು ಇನ್ನಷ್ಟು ಹತ್ತಿರವಾಗಿಸಲಿವೆ.

ನಾಳೆ ನಡೆಯಲಿರುವ ಅದ್ಧೂರಿ ಸಮಾರೋಪದತ್ತ ಐಎಫ್ಎಫ್ಐ ಸಾಗುತ್ತಿದ್ದು, ಈ ವರ್ಷದ 'ಗಡಿಗಳಿಲ್ಲದ ಕಥೆಗಳು' ಎಂಬ ಧ್ಯೇಯವಾಕ್ಯದೊಂದಿಗೆ ಗೋವಾದಲ್ಲಿ ಚಲನಚಿತ್ರಗಳ ಸಾರ್ವತ್ರಿಕ ಭಾಷೆಯ ಸಂಭ್ರಮ ಮುಂದುವರಿದಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಇದೇ ಭಾನುವಾರ ಆಕಾಶವಾಣಿಯ 'ಮನ್ ಕಿ ಬಾತ್' ಕಾರ್ಯಕ್ರಮದ ಮೂಲಕ ದೇಶ-ವಿದೇಶಗಳ ಜನರೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮಾಸಿಕ ರೇಡಿಯೋ ಕಾರ್ಯಕ್ರಮದ ೧೪೦ನೇ ಸಂಚಿಕೆಯಾಗಿದೆ.

ಕಾರ್ಯಕ್ರಮವು ಆಕಾಶವಾಣಿ ಮತ್ತು ದೂರದರ್ಶನದ ಎಲ್ಲಾ ಜಾಲಗಳು, ಆಕಾಶವಾಣಿ ಸುದ್ದಿ ವೆಬ್‌ಸೈಟ್ ಹಾಗೂ ನ್ಯೂಸ್‌ಆನ್‌ಏರ್ ಮೊಬೈಲ್ ಆಪ್‌ನಲ್ಲಿ ಪ್ರಸಾರವಾಗಲಿದೆ. ಅಲ್ಲದೆ, ಆಕಾಶವಾಣಿ ಸುದ್ದಿ, ಡಿಡಿ ನ್ಯೂಸ್, ಪ್ರಧಾನಮಂತ್ರಿ ಕಾರ್ಯಾಲಯ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ಚಾನೆಲ್‌ಗಳಲ್ಲಿ ನೇರ ಪ್ರಸಾರವಾಗಲಿದೆ. ಹಿಂದಿ ಪ್ರಸಾರದ ಬಳಿಕ ಪ್ರಾದೇಶಿಕ ಭಾಷೆಗಳಲ್ಲಿಯೂ ಕಾರ್ಯಕ್ರಮ ಪ್ರಸಾರವಾಗಲಿದೆ.

ಸ್ವಿಜರ್ಲೆಂಡ್ ನ ಜಿನಿವಾದಲ್ಲಿ ನಡೆಯುತ್ತರುವ ವಿಶ್ವ ಚೆಸ್ ಚಾಂಪಿಯನ್ ಷಿಪ್ ನ ಮೂರನೇ ಸುತ್ತಿನಲ್ಲೂ ಕಳೆದ ಬಾರಿಯ ಚಾಂಪಿಯನ್ ಭಾರತದ ಡಿ. ಗುಕೇಶ್ ಮತ್ತು ಉಜ್ಬೇಕಿಸ್ತಾನದ ಜವೋಖಿರ್ ಸಿಂದರೋವ್ ಡ್ರಾ ಸಾಧಿಸಿದ್ದಾರೆ.

ಸದ್ಯ ಮೂರು ಗೇಮ್ ಗಳ ಅಂತ್ಯಕ್ಕೆ ಉಭಯ ಆಟಗಾರರು ತಲಾ ೧.೫ ಅಂಕಗಳನ್ನು ಹೊಂದಿದ್ದು ಸಮಬಲ ಸಾಧಿಸಿದ್ದಾರೆ. ಇಂದು ವಿರಾಮ ದಿನ

೧೪ ಸುತ್ತುಗಳ ಪಂದ್ಯದಲ್ಲಿ ಇನ್ನೂ ೧೧ ಸುತ್ತುಗಳು ಬಾಕಿ ಇದ್ದು, ಮೊದಲು ೭.೫ ಅಂಕ ಗಳಿಸುವ ಆಟಗಾರ ವಿಶ್ವ ಚಾಂಪಿಯನ್ ಪಟ್ಟ ಅಲಂಕರಿಸಲಿದ್ದಾರೆ.

ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಎರಡನೇ ಟೆಸ್ಟ್ ಕ್ರಿಕೆಟ್ ಪಂದ್ಯ ಕೈಸ್ಟ್ ಚರ್ಚ್ ನ ಹ್ಯಾಗ್ಲಿ ಓವಲ್ ಕ್ರೀಡಾಂಗಣದಲ್ಲಿ ಇಂದು ಆರಂಭವಾಗಿದೆ.

ಟಾಸ್ ಸೋತು ಬ್ಯಾಟಿಂಗ್ ಗೆ ಆಹ್ವಾನ ಪಡೆದಿರುವ ನ್ಯೂಜಿಲೆಂಡ್, ಇತ್ತೀಚಿನ ವರದಿ ಬಂದಾಗ ೪ ವಿಕೆಟ್ ನಷ್ಟಕ್ಕೆ ೧೨೩ ರನ್ ಗಳಿಸಿ ಆಡುತ್ತಿದೆ.

ಮುಂಬರುವ ವಿಶ್ವ ಟೆಸ್ಟ್ ಚಾಂಪಿಯನ್ ಷಿಪ್ ಫೈನಲ್ ಪ್ರವೇಶಿಸಲು ಉಭಯ ತಂಡಗಳಿಗೆ ಈ ಪಂದ್ಯ ಅತ್ಯಂತ ಮಹತ್ವದ್ದಾಗಿದೆ.

_____ ಮುಕ್ತಾಯ _____